ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ರಾಜ್ಯದೊಳಗೆ ವಿದೇಶಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ ಸಾಮರ್ಥ್ಯವುಳ್ಳ ಲಚರ ಕೃಷಿ, ಪುಷ್ಪ ಕೃಷಿ, ತೋಟಗಾರಿಕೆ ಆಧಾರಿತ ಕೈಗಾರಿಕೆಗಳನ್ನು ಮತ್ತು ಹ ಉದ್ಯಮವನ್ನು ಸಹ ಅಭಿವೃದ್ಧಿಗೊಳಿಸುವುದು ಹಾಗೂ ಅವುಗಳ ಸ್ಥಾಪನೆ ತ್ತು ವಿಸ್ತರಣೆಗೆ ಸುಲಭವಾಗಿ ಭೂಮಿಗಳನ್ನು ಪಡೆಯುವುದು ಸಾಧ್ಯವಾಗುವಂತೆ ರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ 109ನೇ ಪ್ರಕರಣವನ್ನು ದ್ದುಪಡಿ ಮಾಡುವುದಕ್ಕಾಗಿ 1995ರ ಕರ್ನಾಟಕ ಅಧಿನಿಯಮ ಸಂಖ್ಯೆ 31ನ್ನು ಧಿನಿಯಮಿತಗೊಳಿಸಲಾಯಿತು.

109ನೇ ಪ್ರಕರಣದ (1ಎ) ಉಪ-ಪ್ರಕರಣದ ಅಡಿ ನೀಡುವ ಭೂ ವಿನಾಯಿತಿಯು 961ರ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಉಪಬಂಧಗಳಿಗೆ ಳಪಟ್ಟಿರುತ್ತದೆ ಹಾಗೂ ವಿನಾಯಿತಿಯ ನೀಡಿಕೆಯು 63, 79ಎ, 79ಬಿ ಅಥವಾ)ನೇ ಪ್ರಕರಣದ ಉಪಬಂಧಗಳಿಗೆ ಸೀಮಿತವಾಗಿದೆಯೆಂಬುದನ್ನು ಸ್ಪಷ್ಟಪಡಿಸುವ ಲುವಾಗಿ ಸದರಿ ಉಪ-ಪ್ರಕರಣವನ್ನು ತಿದ್ದುಪಡಿ ಮಾಡುವ ಮೂಲಕ 1995ರ ರ್ನಾಟಕ ಅಧ್ಯಾದೇಶ ಸಂಖ್ಯೆ 8ನ್ನು ಪ್ರಖ್ಯಾಪಿಸಲಾಯಿತು. 1995ರ ಅಧ್ಯಾದೇಶ ಂಖ್ಯೆ 8ರ ಅವಧಿ 1996 ಫೆಬ್ರವರಿ 8ರಂದು ಕೊನೆಗೊಳ್ಳಲಿದ್ದುದರಿಂದ 1996ರ ಧ್ಯಾದೇಶ ಸಂಖ್ಯೆ 1ನ್ನು ಪ್ರಖ್ಯಾಪಿಸಲಾಗಿತ್ತು. ಸದರಿ ಅಧ್ಯಾದೇಶದ ಬದಲಾಗಿ ಈ ಧೇಯಕವನ್ನು ಮಂಡಿಸಲಾಗಿದೆ. ಆದ್ದರಿಂದ ಈ ವಿಧೇಯಕ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡಾವಳಿ ನಿಯಮಗಳ ನಿಯಮ 80ರ ಉಪ-ನಿಯಮ (1)ರ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ

ರಾಜ್ಯದೊಳಗೆ ವಿದೇಶಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ ಸಾಮರ್ಥ್ಯವುಳ್ಳ ಲಚರ ಕೃಷಿ, ಪುಷ್ಪ ಕೃಷಿ,ತೋಟಗಾರಿಕೆ ಆಧಾರಿತ ಕೈಗಾರಿಕೆಗಳನ್ನು ಮತ್ತು ಗೃಹ ದ್ಯಮವನ್ನು ಸಹ ಅಭಿವೃದ್ಧಿಗೊಳಿಸುವುದು ಹಾಗೂ ಅವುಗಳ ಸ್ಥಾಪನೆ ಮತ್ತು ಸ್ತರಣೆಗೆ ಸುಲಭವಾಗಿ ಭೂಮಿಗಳನ್ನು ಪಡೆಯುವುದು ಸಾಧ್ಯವಾಗುವಂತೆ ಕರ್ನಾಟಕ ೂಸುಧಾರಣಾ ಅಧಿನಿಯಮ, 1961ರ 109ನೇ ಪ್ರಕರಣವನ್ನು ತಿದ್ದುಪಡಿ ಾಡುವುದಕ್ಕಾಗಿ 1995ರ ಕರ್ನಾಟಕ ಅಧಿನಿಯಮ ಸಂಖ್ಯೆ 31ನ್ನು ಧಿನಿಯಮಿತಗೊಳಿಸಲಾಯಿತು.

109ನೇ ಪ್ರಕರಣದ (1ಎ) ಉಪ-ಪ್ರಕರಣ ಅಡಿ ನೀಡುವ ಭೂವಿನಾಯಿತಿಯು)61ರ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಉಪಬಂಧಗಳಿಗೆ ಳಪಟ್ಟಿರುತ್ತದೆ ಹಾಗೂ ವಿನಾಯಿತಿಯ ನೀಡಿಕೆಯು 63, 79ಎ, 79ಬಿ ಅಥವಾ)ನೇ ಪ್ರಕರಣದ ಉಪಬಂಧಗಳಿಗೆ ಸೀಮಿತವಾಗಿದೆಯೆಂಬುದನ್ನು ಸ್ಪಷ್ಟಪಡಿಸುವ ುವಾಗಿ ಸದರಿ ಉಪ-ಪ್ರಕರಣವನ್ನು ತಿದ್ದುಪಡಿ ಮಾಡುವ ಮೂಲಕ 1995ರ ರ್ನಾಟಕ ಅಧ್ಯಾದೇಶ ಸಂಖ್ಯೆ 8ನ್ನು ಪ್ರಖ್ಯಾಪಿಸಲಾಯಿತು. 1995ರ ಅಧ್ಯಾದೇಶ ಂಖ್ಯೆ 8ರ ಅವಧಿ 1996ರ ಫೆಬ್ರವರಿ 8 ರಂದು ಕೊನೆಗೊಳ್ಳಲಿದ್ದುದರಿಂದ 1996 ಧ್ಯಾದೇಶ ಸಂಖ್ಯೆ 1ನ್ನು ಪ್ರಖ್ಯಾಪಿಸಲಾಗಿತ್ತು.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ಕರ್ನಾಟಕ ವಿಧಾನಸಭೆಯು ಧಿವೇಶನದಲ್ಲಿಲ್ಲದಿದ್ದುದರಿಂದ ಮೇಲ್ಕಂಡ ಅಧ್ಯಾದೇಶವನ್ನು ಪ್ರಖ್ಯಾಪಿಸಲಾಯಿತು.

ಈ ವಿಧೇಯಕವನ್ನು ಅಧ್ಯಾದೇಶದ ಬದಲಾಗಿ ಮಂಡಿಸಲಾಗಿದೆ.

ಆರ್ಥಿಕ ಜ್ಞಾಪಕ ಪತ್ರ

ಪ್ರಸ್ತಾವಿತ ತಿದ್ದುಪಡಿಯಿಂದಾಗಿ ಯಾವುದೇ ಹೆಚ್ಚುವರಿ ಹಣಕಾಸು ವೆಚ್ಚ ಉಂಟಾಗುವುದಿಲ್ಲ.

ಆರ್.ಎಲ್. ಜಾಲಪ್ಪ
ಕಂದಾಯ ಸಚಿವರು

ನಿಂ.ಹು. ಮುತ್ತಲಗೇರಿ
ಕಾರ್ಯದರ್ಶಿ.

ಅನುಬಂಧ

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10) ಉದ್ಧೃತ ಭಾಗ

** ** **

109. ಕೆಲವು ಭೂಮಿಗಳಿಗೆ ಕೆಲವು ಉಪಬಂಧಗಳಿಂದ ವಿನಾಯಿತಿ.

"(1) ನಿರ್ದಿಷ್ಟಪಡಿಸಬಹುದಾದಂಥ ನಿಯಮಗಳಿಗೆ ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮೀಣ ಯೋಜನೆ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) ಉಪಬಂಧಗಳಿಗೆ ಒಳಪಟ್ಟು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ 63, 79ಎ, 79ಬಿ ಅಥವಾ 80ನೇ ಪ್ರಕರಣಗಳ ಉಪಬಂಧಗಳಿಂದ ಕೆಳಕಂಡವುಗಳಿಗಾಗಿ ಉಪಯೋಗಿಸಲಾಗುವ ಯಾವುದೇ ಪ್ರದೇಶದಲ್ಲಿನ ಯಾವುದೇ ಭೂಮಿಗೆ ವಿನಾಯಿತಿ ನೀಡತಕ್ಕದ್ದು, ಎಂದರೆ,-

(i) ಕೈಗಾರಿಕಾ ಅಭಿವೃದ್ಧಿಗಳಿಗಾಗಿ ಬಳಸಲಾಗುವ ಭೂಮಿ, ಅದರ ವಿಸ್ತೀರ್ಣವು ನಾಲ್ಕು ಯೂನಿಟ್‌ಗಳನ್ನು ಮೀರತಕ್ಕದ್ದಲ್ಲ.

(ii) ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದ ಶೈಕ್ಷಣಿಕ, ಸಂಸ್ಥೆಗಳಿಗಾಗಿ, ಕೃಷಿಯೇತರ ಉದ್ದೇಶಕ್ಕಾಗಿ ಬಳಸುವ ಭೂಮಿ, ಅದರ ವಿಸ್ತೀರ್ಣವು ನಾಲ್ಕು ಯೂನಿಟ್‌ಗಳನ್ನು ಮೀರತಕ್ಕದ್ದಲ್ಲ.

(iii) ಮಾನ್ಯತೆ ಪಡೆದ ಅಥವಾ ನೋಂದಾಯಿತವಾದ ನಿಕಾಯದಿಂದ ಸ್ಥಾಪಿತವಾದ ಅಥವಾ ನಿರ್ಮಿತವಾದ, ಸರ್ಕಾರವು ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸುವ ಪೂಜಾ ಸ್ಥಳಗಳಿಗಾಗಿ ಕೃಷಿಯೇತರ ಉದ್ದೇಶಕ್ಕಾಗಿ ಬಳಸುವ ಭೂಮಿ, ಅದರ ವಿಸ್ತೀರ್ಣವು ಒಂದು ಯೂನಿಟನ್ನು ಮೀರತಕ್ಕದ್ದಲ್ಲ.

(iv) ರಾಜ್ಯ ಸರ್ಕಾರದಿಂದ ಅನುಮೋದಿತವಾದ ಗೃಹ ನಿರ್ಮಾಣ ಯೋಜನೆಗಾಗಿ ಬಳಸುವ ಭೂಮಿ, ಅದರ ವಿಸ್ತೀರ್ಣವು ಹತ್ತು ಯೂನಿಟ್‌ಗಳನ್ನು ಮೀರತಕ್ಕದ್ದಲ್ಲ.

(v) ಪುಷ್ಪ ಕೃಷಿ ಮತ್ತು ಕೃಷಿ ಆಧಾರಿತ ಕೈಗಾರಿಕೆಗಳು ಒಳಗೊಂಡಂತೆ ತೋಟಗಾರಿಕೆಯ ಉದ್ದೇಶಕ್ಕಾಗಿ ಬಳಸುವ ಭೂಮಿ, ಅದರ ವಿಸ್ತೀರ್ಣವು ಇಪ್ಪತ್ತು ಯೂನಿಟ್‌ಗಳನ್ನು ಮೀರತಕ್ಕದ್ದಲ್ಲ

(1ಎ) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ ರಾಜ್ಯ ಸರ್ಕಾರವು ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ, ಅಧಿಸೂಚನೆಯ ಮೂಲಕ, ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಯಾವುದೇ ವಿಸ್ತೀರ್ಣದ ಭೂಮಿಗೆ ವಿನಾಯಿತಿ ನೀಡಬಹುದು.

BLANK PAGE